# ಮಾಂಗಲ್ಯಕ್ಕೆ ಮತ್ತೊಂದು ರೂಪ

◆ **ನಟನೆ, ನಿರ್ದೇಶನ, ನಿರ್ಮಾಣ ಹೇಗೆ ಮಾಡಲು ಸಾಧ್ಯ ಆಗುತ್ತಿದೆ?**

ನಟನೆ ನನಗೆ ಪ್ಯಾಶನ್ ರೂಪದಲ್ಲಿ ಬಂದಿದೆ. ಹದಿನಾರು ವರ್ಷಗಳಿಂದ ನಟನೆಯನ್ನು ಮಾಡುತ್ತಿದ್ದೇನೆ. ಒಂಬತ್ತು ವರ್ಷಗಳಿಂದ ನಿರ್ಮಾಣವನ್ನು ಮಾಡುತ್ತಿದ್ದೇನೆ. ನಿರ್ದೇಶನವೂ ಹೊಸದೇನೂ ಅಲ್ಲ. ಮೊದಲೆಲ್ಲ ಆರಂಭದ ಕೆಲವು ಕಂತುಗಳನ್ನು ಮಾತ್ರ ನಿರ್ದೇಶಿಸುತ್ತಿದ್ದೆ. ನಂತರ ಅದನ್ನು ಬೇರೆಯವರು ಮುಂದುವರಿಸುತ್ತಿದ್ದರು. ಈಗ ಉಸ್ತುವಾರಿ ಜೊತೆ ನಿರ್ದೇಶನವನ್ನೂ ಮಾಡುತ್ತಿದ್ದೇನೆ. ಹಾಗೆಂದು ಪೂರ್ಣ ನಾನೊಬ್ಬನೇ ಮಾಡುತ್ತೇನೆ ಎಂದಲ್ಲ. ನವೀನ್ ಸೋಮನಹಳ್ಳಿ ಅವರೂ ನಿರ್ದೇಶನದಲ್ಲಿ ತೊಡಗಿದ್ದಾರೆ. ಒಟ್ಟಾರೆ ಇದು ಒಂದು ತಂಡದ ಕೆಲಸ. ಒಬ್ಬರಿಗೊಬ್ಬರು ಸಹಕರಿಸುತ್ತ ಜೊತೆಗೆ ನಿಂತರೆ ಮಾತ್ರ ಮಾಡಲು ಸಾಧ್ಯ. ಐದಾರು ವರ್ಷಗಳಿಂದ ಈ ತಂಡ ನನ್ನ ಜೊತೆಗೆ ಇದೆ. ಈ ತಂಡ ಇರುವುದರಿಂದ ನನಗೆ ಅಂತಹ ಸವಾಲು ಅನ್ನಿಸಿಲ್ಲ.

◆ **ಧಾರಾವಾಹಿಯನ್ನು ಹೊಸ ಬಗೆಯಲ್ಲಿ ಕಟ್ಟುವುದು ಹೇಗೆ?**

ಧಾರಾವಾಹಿ ನಿರ್ಮಿಸುವ ಕ್ರಿಯೆ ಎನ್ನುವುದು ನಿತ್ಯವೂ ಹೊಸತನ್ನು ಅಳವಡಿಸಿಕೊಂಡು ಬದಲಾಗುತ್ತಾ ಬೆಳೆದಿದೆ. ನಿರ್ಮಾಣ ಸಂಸ್ಥೆ ಅಥವಾ ಒಂದು ಶೋ ಉಳಿಯಬೇಕು ಎಂದರೆ ಪ್ರತಿಸ್ಪರ್ಧಿಗಳಿಗಿಂತ ಚೆನ್ನಾಗಿ ಕೊಡಬೇಕು. ಇದು ಅನುಗಾಲವೂ ಇರುವ ಏಕೈಕ ಸವಾಲು. ಇದನ್ನು ಹಲವು ಆಯಾಮದಲ್ಲಿ ನೋಡಬೇಕಾಗುತ್ತದೆ. ನಮ್ಮ ಯೋಚನೆ ಕ್ರಿಯಾಶೀಲವಾಗಿ ಇರಬೇಕಾಗುತ್ತದೆ. ಕಲಾವಿದರಲ್ಲಿಯೂ ಹೊಸತನವನ್ನು ಹುಡುಕಿ ತೆಗೆಯಬೇಕಾಗುತ್ತದೆ. ಅದಕ್ಕೆ ತಕ್ಕಂತೆ ತಾಂತ್ರಿಕ ಕೌಶಲ್ಯದ ತಂಡವೂ ಇರಬೇಕಾಗುತ್ತದೆ. ಅಂದರೆ ನಾವೂ ಹೊಸ ಸಿದ್ಧತೆ ಮಾಡಿಕೊಂಡಿರಬೇಕು. 'ಲಕ್ಷಣ' ಆದ ನಂತರ ಸ್ವಲ್ಪ ಬಿಡುವು ತೆಗೆದುಕೊಂಡಿದ್ದೆ. ವಿರಾಮದ ಆ ಸಮಯ ಹೊಸ ಚಿಂತನೆಗೆ ಬೇಕಾಗುತ್ತದೆ. ಇದರಲ್ಲಿ ಕುಡುಕನ ಪಾತ್ರವನ್ನು ಮಾಡುತ್ತಿದ್ದೇನೆ. ಅಂತಹ ಪಾತ್ರವನ್ನು ನೆಗೆಟಿವ್ ಮಾಡುವುದು ಒಂದು ರೀತಿಯಲ್ಲಿ ಸುಲಭ. ಅದನ್ನೇ ಪಾಸಿಟಿವ್ ರೂಪದಲ್ಲಿ ತೆಗೆದುಕೊಂಡು ಹೋಗುವುದು ಕಷ್ಟ ಎಂದೆನಿಸುತ್ತದೆ. ಭಾವನೆ, ನೋಟದಲ್ಲಿ ಸಣ್ಣ ವ್ಯತ್ಯಾಸ ಆದರೂ ನೆಗೆಟಿವ್ ಆಗಿ ಕಾಣಿಸುತ್ತದೆ. ಹಾಗೆ ಆಗದಂತೆ ನೋಡಲು ಒಂದಿಷ್ಟು ಹೋಮ್‌ವರ್ಕ್ ಮಾಡಿಕೊಂಡಿದ್ದೇನೆ. ಈಗ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ. ಮೊದಲಿಗಿಂತ ಭಿನ್ನವಾಗಿ ನಟಿಸುತ್ತಿದ್ದೇನೆ ಎನ್ನುವುದನ್ನು ಕೆಲವರಿಂದ ಕೇಳಿದ್ದೇನೆ.

◆ **ಕಥೆಯ ನಿರೂಪಣೆಗೆ ಸುಧಾರಾಣಿ ಪ್ರವೇಶ ಆಗಿದ್ದರ ಉದ್ದೇಶ ಏನು?**

ಕಥೆಯನ್ನು ನಿರೂಪಣೆ ಮಾಡಿದರೆ ಹೇಗೆ ಎನ್ನುವ ವಿಚಾರ ನಮ್ಮ ತಂಡದಲ್ಲಿ ಬಂತು. ಅದಕ್ಕೆ ಸುಧಾರಾಣಿ ಸೂಕ್ತ ಆಗಬಹುದು ಎನ್ನುವ ಸೂಚನೆಯೂ ಬಂತು. ಹಾಗಾಗಿ ಕಥೆಯನ್ನು ಅವರಿಂದಲೇ ಆರಂಭಿಸಿದೆವು. ಅದು ಕೆಲವು ಕಂತುಗಳಿಗೆ ಮಾತ್ರ ಸೀಮಿತ. ಸುಧಾರಾಣಿ ವಾಹಿನಿಯ ಕೋರಿಕೆಯಂತೆ ತುಂಬ ಖುಷಿಯಿಂದ ಬಂದು ಕೆಲಸ ಮಾಡಿದರು. ಚಿತ್ರೀಕರಣಕ್ಕೆ ಸ್ವಲ್ಪ ಹೆಚ್ಚು ಸಮಯವನ್ನೇ ತೆಗೆದುಕೊಂಡಿದ್ದೇವೆ. ಅವರ ಜೊತೆಗಿನ ಕೆಲಸ ಅದ್ಭುತವಾಗಿತ್ತು. ಈ ಪ್ರಯೋಗವೂ ಹೊಸದು ಅನ್ನಿಸುತ್ತದೆ.

◆ **'ಮಾಂಗಲ್ಯ' ಧಾರಾವಾಹಿ ಹಿಂದೆ ಪ್ರಸಾರವಾಗಿದೆ. ಅದನ್ನು ಮತ್ತೆ ಹೇಗೆ ಭಿನ್ನವಾಗಿ ಕಟ್ಟುತ್ತೀರಿ?**

ಉದಯದಲ್ಲಿಯೇ 'ಮಾಂಗಲ್ಯ' ಎರಡು ದಶಕಗಳ ಹಿಂದೆ ಪ್ರಸಾರವಾದ ಜನಪ್ರಿಯ ಧಾರಾವಾಹಿ. ಉದಯ ಅಂದರೆ ಮಾಂಗಲ್ಯ, ಮಾಂಗಲ್ಯ ಅಂದರೆ ಉದಯ ಅನ್ನುವ ಮಟ್ಟಿಗೆ ಅದು ಜನ ಮಾನಸದಲ್ಲಿ ಸ್ಥಿರಗೊಂಡಿತ್ತು. ಆಗಲೇ 2500ಕ್ಕೂ ಅಧಿಕ ಕಂತುಗಳಲ್ಲಿ ಪ್ರಸಾರ ಆಯಿತು. ಈ ನಮ್ಮ ಕಥೆಗೆ ಒಂದು ಹೆಸರು ಬೇಕಿತ್ತು. ಆ ಬಗ್ಗೆ ಯೋಚಿಸುತ್ತಿದ್ದವನಿಗೆ 'ಮಾಂಗಲ್ಯ' ನೆನಪಿಗೆ ಬಂತು. ವಾಹಿನಿಯವರ ಜೊತೆ ಏಕೆ ಆ ಹೆಸರು ಇಡಬಾರದು ಎನ್ನುವ ಪ್ರಶ್ನೆಯನ್ನು ಇಟ್ಟೆ. ಒಂದಿಷ್ಟು ಚರ್ಚೆ ಆದ ನಂತರ ಈ ಹೆಸರು ಅಂತಿಮ ಮಾಡಿದೆವು. ಆ 'ಮಾಂಗಲ್ಯ' ಆ ಕಾಲದ ಕಥೆ, ಈ ತಲೆಮಾರಿನ ಕಥೆಗೆ ಸರಿಹೊಂದುವಂತೆ ಈ 'ಮಾಂಗಲ್ಯ' ನಿರೂಪಣೆ ಆಗಿದೆ. ಹಳೆಯ ಧಾರಾವಾಹಿ ಹೆಸರು ಇನ್ನೂ ಜನರ ನೆನಪಿನಲ್ಲಿದೆ. ಅದು ಈಗ ನಮ್ಮ ಸಹಾಯಕ್ಕೂ ಬಂದಿದೆ.

◆ **ಕುಟುಂಬ, ವೈಯಕ್ತಿಕ ಬದುಕಿಗೆ ಸಮಯವನ್ನು ಹೇಗೆ ಕೊಡುತ್ತೀರಿ?**

ಜೀವನದಲ್ಲಿ ಕೆಲಸ ಮುಖ್ಯ ಎಂದು ನನ್ನ ತಂದೆ ಹೇಳಿಕೊಟ್ಟಿದ್ದಾರೆ. ಅದನ್ನೇ ಪಾಲಿಸುತ್ತಿದ್ದೇನೆ. ಈಗ ಈ ಕೆಲಸ, ಆರಂಭದಲ್ಲಿ ತುಂಬ ಒತ್ತಡ ಸಹಜ. ನಟನೆ ಚಿತ್ರೀಕರಣ ನಿರ್ವಹಿಸಿ, ಎಡಿಟಿಂಗ್ ಸಂದರ್ಭದಲ್ಲಿ ಮಾತ್ರವಲ್ಲದೆ ಪ್ರಸಾರವಾದ ಕಂತುಗಳನ್ನೂ ನೋಡಬೇಕಾಗುತ್ತದೆ. ಇದರ ಜೊತೆ ಒಬ್ಬ ಸಂಸಾರಿಯಾಗಿ ಮನೆಗೂ ಸಮಯವನ್ನು ಕೊಡಬೇಕಾಗುತ್ತದೆ. ಮನೆಯವರು ನನ್ನ ವೃತ್ತಿಯಲ್ಲಿ ಸಮಯ ಸಿಗುವುದು ಕಷ್ಟ ಎನ್ನುವುದನ್ನು ಅರ್ಥಮಾಡಿಕೊಂಡಿದ್ದಾರೆ. ಮುಂದೆ ಆರಾಮಾಗಿ ಇರುವ ಕಾಲ ಬಂದೇ ಬರುತ್ತದೆ. ಈಗ ಎಷ್ಟು ಸಾಧ್ಯವೋ ಅಷ್ಟು ಕೆಲಸ ಮಾಡಬೇಕು.

◆ **ಕಲಾಭಿರುಚಿ ಬಂದಿದ್ದು ಹೇಗೆ?**

ಮೂಲತಃ ಬೆಂಗಳೂರಿನವನು. 16ನೇ ವರ್ಷದಲ್ಲಿ 'ಜೋಶ್' ಸಿನಿಮಾಕ್ಕೆ ಆಡಿಷನ್ ನೀಡಿದೆ. ಲಕ್ಷಾಂತರ ಸ್ಪರ್ಧಿಗಳಲ್ಲಿ ಆರು ಜನರನ್ನು ಆಯ್ಕೆ ಮಾಡಿಕೊಂಡರು. ಅದರಲ್ಲಿ ನಾನೂ ಒಬ್ಬನಾದೆ. ಅಲ್ಲಿಂದ ನನಗೆ ಈ ಇಂಡಸ್ಟ್ರಿ ಪ್ರೀತಿ ಹುಟ್ಟಿಕೊಂಡಿತು. ನಾನು ನಟಿಸಿದ ಮೊದಲ ಸಿನಿಮಾದ ನಿರ್ದೇಶಕ ಶಿವಮಣಿ ಅವರೇ ಟೀವಿಗೂ ಕರೆತಂದರು. 'ಕ್ಲಾಸ್‌ಮೇಟ್' ಧಾರಾವಾಹಿ ಮೂಲಕ ಕಿರುತೆರೆಗೆ ಪರಿಚಯ ಆದೆ. ಅಲ್ಲಿಂದ ಇಲ್ಲಿಯವರೆಗೆ 14 ಧಾರಾವಾಹಿಗಳಲ್ಲಿ ನಟಿಸಿದ್ದೇನೆ. 6ನೇ ಧಾರಾವಾಹಿ ನಿರ್ಮಿಸುತ್ತಿದ್ದೇನೆ.



**ಜಗನ್ನಾಥ**
ಉದಯದ
'ಮಾಂಗಲ್ಯ'ದ
ತಾರಕ್

■ ರಾಘವೇಂದ್ರ ಕೆ.